# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

**ಅಧೀಕ್ಷಕ ಅಭಿಯಂತರರು(ವಿ)**
**ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23**
**Tel: 0836-2364144, Fax: 0836-2366184**

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

**Corporate Identity Number** (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:257/2022**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವಲಯ ಕಚೇರಿ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.
ಶ್ರೀ **ರೇವಣಸಿದ್ದಪ್ಪ ಗವಣ್ಣವರ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.
ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

**ಶ್ರೀ ವಿನಯ ಎಚ್ ನೀಲರಡ್ಡಿ,**
(R R No : WNMP-06)
ರೇಣುಕಾಂಬಾ ಕಾಲೋನಿ,
ಲಕ್ಷ್ಮೀ ನಗರ, ವಿದ್ಯಾಗೀರಿ,
ಧಾರವಾಡ-580004. ..............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ,
ಹೆಸ್ಕಾಂ, ಧಾರವಾಡ. ..................**ಪ್ರತಿವಾದಿಗಳು.**

**ಪೀಠಿಕೆ:**

1. ಶ್ರೀ ವಿನಯ ಎಚ್ ನೀಲರಡ್ಡಿ, ರೇಣುಕಾಂಬಾ ಕಾಲೋನಿ, ಲಕ್ಷ್ಮೀ ನಗರ, ವಿದ್ಯಾಗಿರಿ, ಧಾರವಾಡ ಇವರ ಸ್ಥಾವರ ಸಂಖ್ಯೆ: WNMP-06 ನೇದ್ದ ಸ್ಥಾವರವು ಎಲ್.ಟಿ-5(ಬಿ) ಜಕಾತಿಯಡಿಯಲ್ಲಿ ದಿನಾಂಕ:17-04-1995 ರಲ್ಲಿ ವಿದ್ಯುತ್ ಮಂಜೂರಾತಿಯೊಂದಿಗೆ ಜಲ್ಲಿ ಕಲ್ಲು ಕ್ರಷರ್ ಘಟಕಕ್ಕೆ ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರವು ದಿನಾಂಕ: 05-12-2014 ರಂದು ಜಿಲ್ಲಾಧಿಕಾರಿಗಳು ಧಾರವಾಡ ಜಿಲ್ಲೆ ಇವರ ಆದೇಶದನುಸಾರ ಜಲ್ಲಿ ಕಲ್ಲು ಕ್ರಶರ್ ಘಟಕಗಳನ್ನು ಬಂದ ಮಾಡಲಾಗಿದ್ದಿರುತ್ತದೆ. ಸದರಿ ಸ್ಥಾವರದ ಬಳಕೆಯು ಸ್ಥಗಿತಗೊಂಡಿರುತ್ತದೆ. ಅಲ್ಲಿಂದ 6 ರಿಂದ 7 ವರ್ಷಗಳ ನಂತರ ದಿನಾಂಕ: 05-10-2021 ರಲ್ಲಿ ಏಕಾಏಕಿ ಹೆಸ್ಕಾಂನವರು ನನಗೆ ಸದರಿ ಸ್ಥಾವರಕ್ಕೆ ಸಂಬಂಧಪಟ್ಟಂತೆ ರೂ. 1,17,808/-ಗಳನ್ನು ಹೆಚ್ಚುವರಿಯಾಗಿ ಬೇಡಿಕೆ ಆಕರಿಸಿ ಬಿಲ್ ನೀಡಿದ್ದು, ಸದರಿ ಮೊತ್ತವನ್ನು ಪಾವತಿಸುವಂತೆ ಸೂಚಿಸಿದ್ದಿರುತ್ತದೆ. ಸದರಿ ಮೊತ್ತವನ್ನು ಬರಿಸದೇ ಇರುವದಕ್ಕೆ ಹೆಚ್ಚುವರಿಯಾಗಿ ಆಕರಿಸಿರುವ ರೂ. 1,17,808/-ಗಳಲ್ಲಿ ಸದರಿ ಸ್ಥಾವರಕ್ಕೆ ಇದ್ದ ನನ್ನ ಠೇವಣಿ ಮೊತ್ತ ರೂ. 14880/- ನ್ನು ಹೊಂದಾಣಿಕೆ ಮಾಡಿ, ಉಳಿದ ಕಂದಾಯ ಬಾಕಿ ಮೊತ್ತವನ್ನು ನನ್ನ ಇನ್ನೊಂದು ಸ್ಥಾವರ ಸಂಖ್ಯೆ RMPMP-39916 ವರ್ಗಾಯಿಸಲಾಗಿದ್ದಿರುತ್ತದೆ. ಲೈಸನ್ಸುದಾರರು ನಿಯಮಬಾಹಿರವಾಗಿ ತಮ್ಮ ಇಚ್ಚೆಯಂತೆ ಹೆಚ್ಚುವರಿಯಾಗಿ ಬೇಡಿಕೆ ಆಕರಿಸಿರುವ ಮೊತ್ತ ರೂ.1,17,808/-ಗಳನ್ನು ಹಿಂಪಡೆಯುವಂತೆ ಆದೇಶ ಹೊರಡಿಸಬೇಕೆಂದು ಗ್ರಾಹಕರು ದಿನಾಂಕ31-01-2022 ರಂದು ವೇದಿಕೆಗೆ ದೂರು ಅರ್ಜಿ ಸಲ್ಲಿಸಿರುತ್ತಾರೆ.
2. ಸ್ಥಾವರ ಸಂಖ್ಯೆ: WNMP-06 ನೇದ್ದ ಸ್ಥಾವರವು ಎಲ್.ಟಿ-5(ಬಿ) ಜಕಾತಿಯಡಿಯಲ್ಲಿ ದಿನಾಂಕ:17-04-1995 ರಲ್ಲಿ ವಿದ್ಯುತ್ ಮಂಜೂರಾತಿಯೊಂದಿಗೆ ಜಲ್ಲಿ ಕಲ್ಲು ಕ್ರಷರ್ ಘಟಕ್ಕೆ ಸಂಪರ್ಕಿತಗೊಂಡಿದ್ದು ಸದರಿ ಸ್ಥಾವರದಲ್ಲಿ ಬಿಟ್ಟು ಹೋಗಿರುವ ಬಳಕೆಯ ಮೊತ್ತವನ್ನು ಪಾವತಿಸುವಂತೆ ದಿನಾಂಕ:05-10-2021 ರಲ್ಲಿ ಕಂದಾಯ ಬಾಕಿ ಮೊತ್ತವನ್ನು ನೀಡಿದ್ದಿರುತ್ತದೆ. ಸದರಿ ಮೊತ್ತವನ್ನು ತುಂಬದೆ ಇರುವ ಕಾರಣ ಸದರಿ

ಸ್ಥಾವರಕ್ಕೆ ಇರುವ ಠೇವಣಿ ಮೊತ್ತ ರೂ.14880/-ಗಳನ್ನು ENMP-06 ಇರುವ ಬಾಕಿ ಮೊತ್ತ ರೂ.117808/-ಗಳಲ್ಲಿ ಠೇವಣಿ ಮೊತ್ತ ರೂ.14880/-ಗಳನ್ನು ಹೊಂದಾಣಿಕೆ ಮಾಡಿ ಉಳಿದ ಕಂದಾಯ ಬಾಕಿ ಮೊತ್ತ ರೂ.102938/-ಗಳನ್ನು ಇವರದೇ ಸ್ಥಾವರವಾದ RMPMP-39916 ಹೆಸರಿನ ರಾಮಾಪೂರ ಗ್ರಾಮದಲ್ಲಿ ಇರುವ ವೈಷ್ಣವಿ ಸ್ಟೋನ ಕ್ರಶರ್ ಎಂಬ ಹೆಸರಿನ ಸ್ಥಾವರಕ್ಕೆ ವರ್ಗಾಯಿಸಿ ಕಚೇರಿ ಪತ್ರ ಸಂಖ್ಯೆ:7871-72 ದಿ:28-01-2022 ರ ಮುಖಾಂತರ ಹೊಂದಾಣಿಕೆ ಮಾಡಿದ್ದಿರುತ್ತದೆ. ಸದರಿ ಗ್ರಾಹಕರು ತಮ್ಮ ದೂರಿನಲ್ಲಿ ತಿಳಿಸಿದ ಪ್ರಕಾರ WNMP-6 ಗೆ 2016 ರಿಂದ ಚಾಲ್ತಿಯಲ್ಲಿ ಇಲ್ಲವೆಂದು ತಿಳಿಸಿದ್ದು, ಸತ್ಯಕ್ಕೆ ದೂರವಾಗಿರುತ್ತದೆ. ಮಾರ್ಚ-2019 ರವರೆಗೆ ಸುಡತಿಯೂ ಬಂದಿರುತ್ತದೆ. ಅದೇ ರೀತಿ ಗ್ರಾಹಕರು 2016 ರಿಂದ ಬಳಸದೆ ಇದ್ದಲ್ಲಿ ಈ ಕಚೇರಿಗೆ ಡಿಸಮೆಂಟಲ್ ಮಾಡಲು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದರೂ ಸಹ ರಿಕವ್ಹರಿ ಆ್ಯಕ್ಟ ಪ್ರಕಾರ ಕಂದಾಯ ಮೊತ್ತವನ್ನು ವಸೂಲಿ ಮಾಡಲು ಈ ಕಚೇರಿಯಿಂದ ಪತ್ರವನ್ನು ಬರೆದಿದ್ದು ತದನಂತರ ಗ್ರಾಹಕರು ಬಾಕಿ ಮೊತ್ತವನ್ನು ತುಂಬದೆ ಇದ್ದ ಬಗ್ಗೆ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿ ಕರಾರು ಪತ್ರವನ್ನು ರದ್ದು ಪಡಿಸಿ, ಈ ಕಚೇರಿಯಿಂದ ಡಿಸಮೆಂಟಲ್ ಪ್ರಸ್ತಾವನೆಯನ್ನು ಕಳುಹಿಸಿ RMPMP-39916 ಗೆ ಹೊಂದಾಣಿಕೆ ಮಾಡಿ ತುಂಬಲು ತಿಳಿಸಿ ಬಿಲ್ಲನ್ನು ಕಳುಹಿಸಲಾಗಿದ್ದಿರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾರವಾಡರವರು ದಿನಾಂಕ:17-03-2022 ರಲ್ಲಿ ವೇದಿಕೆಗೆ ತಿಳಿಸಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ:08-04-2022 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| | |
|---|---|
| ಗ್ರಾಹಕರು,<br>ಶ್ರೀ ವಿನಯ ನೀಲರಡ್ಡಿ | ನಿಗಮದ ಪರವಾಗಿ<br>ಶ್ರೀ ವೆಂಕಟರೆಡ್ಡಿ ಜಿ<br>ಸ.ಕಾ.ನಿ.ಇಂ(ವಿ)<br>ಕಾ ಮತು ಪಾ ಗ್ರಾಮೀಣ ಉಪ ವಿಭಾಗ, ಧಾರವಾಡ. |

**<u>ಗ್ರಾಹಕರು ಶ್ರೀ ವಿನಯ ನೀಲರಡ್ಡಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:</u>**

Name of the Complaint: Vinay H Neelaraddi
Full Address of the Complaint:Renukamba Colony, Lakxhimi Nagar, Vidyagiri, Dharwad-580004
Mobile No-9880494165
R.R.Number-WNMP-06

Name of the Licensee:RSD HESCOM, Vidyagiri, Dharwad.

Details of Complaint/Grivance: Excess bill generated after a gap of 6-7 Years, Malafide bill, Grave lapses done by AEE, SO off the division came under our RR Number limits.

Details of intimiation of grievance by the consumer to the Licensee:1) Letters 2) eMails 3) One to one discussion in their respective offices with AEE EE and MRT 4) Teliphone conversations regarding the complaint issue

Whether any reply has been received from the Licensee:**No REPLY RECEIVED**

Nature of relief sought:1) WNMP-6 is not working since 2016, as per Deputy Commissioner Office Proceedings and the same is considered for final order. 2) The work place beloging to said RR Number is closed and TC is Disconnected, No Live Electricity is running, Hence through explanation and on site visit with the comitee is required to come to the final conclusion. 3) Erring officials would be restricated according o service Law of books. 4) Personal presentation requested on tavle with CGRF Comitte.

**ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾರವಾಡ ಇವರ ಲಿಖಿತ ಹೇಳಿಕೆ:**

ವಿಷಯ: ಶ್ರೀ ವಿನಯ ಎಚ್ ನೀಲರಡ್ಡಿ ಗ್ರಾಹಕರ ಕುಂದುಕೊರತೆಯ ನಿವಾರಣಾ ವೇದಿಕೆಗೆ, ಸಲ್ಲಿಸುವ ದೂರಿನ ಬಗ್ಗೆ ವರದಿ ನೀಡುವ ಕುರಿತು.

ಉಲ್ಲೇಖ: ತಮ್ಮ ಕಚೇರಿ ಪತ್ರ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾ.ಕುಂ.ಕೊ.ನಿ.ವೇ/2021-22/ 5744-45 ದಿ:30-02-2022.

*******

ಮೇಲಿನ ವಿಷಯಕ್ಕೆ ಸಂಬಧಿಸಿದಂತೆ ಗ್ರಾಹಕರಾದ ಶ್ರೀ ವಿನಯ ಎಚ್ ನೀಲರೆಡ್ಡಿ ಇವರ ಸ್ಥಾವರ ಸಂಖ್ಯೆ WNMP-6 ಗೆ ಹೆಚ್ಚುವರಿ ಬಿಲ್ಲು ಆಕರಣೆ ಮಾಡಿರುವ ಕುರಿತು ಗ್ರಾಹಕರು ಸದರಿ ಸ್ಥಾವರದಲ್ಲಿ ಸಂಬಂಧಪಟ್ಟಂತೆ ಗ್ರಾಹಕರ ವೇದಿಕೆಗೆ ನಮ್ಮ ಕಚೇರಿ ವಿರುದ್ದ ದೂರನ್ನು ದಾಖಲಿಸಿ ವಿಚಾರಣೆಗೆ ವಿನಚಿತಿಸಿಕೊಂಡಿರುತ್ತಾರೆಂದು ಮತ್ತು ಅರ್ಜಿಯನಲ್ಲಿನ ಉಲ್ಲೇಖಿಸಿದ ದೂರಿಗೆ ಸೂಕ್ತವಾದ ಉತ್ತರವನ್ನು ದಾಖಲೆಗಳೊಂದಿಗೆ ತಮ್ಮ ಕಚೇರಿಗೆ ಮೇಲಿನ ಉಲ್ಲೇಖದನ್ವಯ ಕಳಿಸುವಂತೆ ತಿಳಿಸಿರುತ್ತೀರಿ ಈ ವಿಷಯವಾಗಿ ಸದರಿ ಸ್ಥಾವರಕ್ಕೆ ಆಕರಣೆ ಮಾಡಿದ ಮೊತ್ತಕ್ಕೆ ಈ ಕೆಳಗಿನಂತೆ ವರದಿಯನ್ನು ನೀಡುತ್ತಿದ್ದು ದಾಖಲೆಗಳನ್ನು ಲಗತ್ತಿಸಿ ದಯಾಪರರ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**ವರದಿ:**

1) ಸ್ಥಾವರ ಸಂಖ್ಯೆ :WNMP-06
2) ಗ್ರಾಹಕರ ಹೆಸರು : ಶ್ರೀ ವಿನಯ ಎಚ್ ನೀಲರೆಡ್ಡಿ
   ವಿಳಾಸ : ವರವನಾಗಲಾವಿ
3) ಗ್ರಾಹಕರ ಸ್ಥಾವರದ ವಿವರದ ಪಟ್ಟಿ : ಜುಲೈ-2013 ರಿಂದ ಫೆಬ್ರುವರಿ-2022 ರವರೆಗಿನ ಪಟ್ಟಿಯನ್ನು ಅವಲೋಕಿಸಲಾಗಿ.

A) ಜುಲೈ-2012 ರಿಂದ ಫೆಬ್ರುವರಿ-2013 ವರೆಗೆ ಇರುವ ಮಾಹಿತಿಯು ನವೆಂಬರ್-2012 ರ ಮಾಹೆಯನ್ನು ಹೊರತುಪಡಿಸಿ ಉಳಿದ ಮಾಹೆಗಳಲ್ಲಿ ನಾರ್ಮಲ್ ಎಂದು G.V.P.ರವರು ನೀಡಿರುತ್ತಾರೆ. ಅದೇ ರೀತಿ ನವೆಂಬರ್-2012 ರಲ್ಲಿ **ಡಿಸ್** ಎಂದು ನೀಡಿರುತ್ತಾರೆ.

B) ಎಪ್ರೀಲ್-2013 ರಿಂದ ಮಾರ್ಚ-2014 ರ ಮಾಹೆಗಳನ್ನು ಅವಲೋಕಿಸಿದಾಗ ಸೆಪ್ಟೆಂಬರ್-2013, ಅಕ್ಟೋಬರ್-2013 ಹೊರತುಪಡಿಸಿ ಮಾರ್ಚ-2014 ರ ತನಕ ನಾರ್ಮಲ್ ಎಂಬುದಾಗಿ ಮತ್ತು ಸೆಪ್ಟಂಬರ್-2013, ಅಕ್ಟೋಬರ್-2013 ಮಾಹೆಯನ್ನು **ಡಿಸ್** ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ.

C) ಎಪ್ರೀಲ್-2014 ರಿಂದ ಮಾರ್ಚ-2015ರ ವರೆಗೆ ಮಾಹಿತಿಗಳನ್ನು ಅವಲೋಕಿಸಿದಾಗ ಎಪ್ರೀಲ್-2014 ರಿಂದ ಡಿಸೆಂಬರ್-2014ನ್ನು ಹೊರತುಪಡಿಸಿ ಮಾರ್ಚ-2015 ರವರೆಗೆ ನಾರ್ಮಲ್ ಎಂದು ನಮೂದಾಗಿದ್ದು, ಡಿಸೆಂಬರ್-2014 ರಲ್ಲಿ **ಡಿಸ್** ಎಂದು ನೀಡಿರುತ್ತಾರೆ.

D) ಎಪ್ರೀಲ್-2015 ರಿಂದ ನವೆಂಬರ್-2015 ರವರೆಗೆ ನಾರ್ಮಲ್ ಎಂದು ಡಿಸೆಂಬರ್-2015 ರಂದು ಅನ್‌ಬಿಲ್ ಎಂದು ಅದೆ ರೀತಿ ಜನೇವರಿ-2016 ರಿಂದ ಮಾರ್ಚ-2016ರವರೆಗೆ VACANT ಎಂದು ನಮೂಧಿಸಿದ್ದು ಇರುತ್ತದೆ.

E) ಎಪ್ರೀಲ್-2016 ರಿಂದ ಮಾರ್ಚ-2017ರವರೆಗೆ ಮಾಹಿತಿಯನ್ನು ಅವಲೋಕಿಸಿದ್ದು ಎಪ್ರೀಲ್-2016 ಮಾಹೆಯನ್ನು ಹೊರತುಪಡಿಸಿ ಮಾರ್ಚ-2017 ವರೆಗೆ ನಾರ್ಮಲ್ ಎಂದು ಎಪ್ರೀಲ್-2016 ರಲ್ಲಿ MCH ಎಂದು ನಮೂದಿಸಿದ್ದು ಇರುತ್ತದೆ.

F) ಎಪ್ರೀಲ್-2017 ರಿಂದ ಮಾರ್ಚ-2018ರ ವರೆಗೆ ನಾರ್‌ಮಲ್ ಎಂದು ನಮೂದಿಸಿದ್ದು ಇರುತ್ತದೆ. ಎಪ್ರೀಲ್-2018 ರಿಂದ ಮಾರ್ಚ-2019 ವರೆಗೆ ಮಾಹಿತಿಯನ್ನು ಅವಲೋಕಿಸಿದಾಗ ಎಪ್ರೀಲ್-2018 ಹಾಗೂ 2019 ಮಾಹೆಯನ್ನು ಹೊರತುಪಡಿಸಿ ಉಳಿದ ಮಾಹೆಗಳಲ್ಲಿ VACANT ಎಂದು ನಮೂಧಿಸಿದ್ದು ಇರುತ್ತದೆ. ಎಪ್ರೀಲ್-2018, ಮಾರ್ಚ-2019ರ ಮಾಹೆಯನ್ನು ನಾರ್ಮಲ್ ಎಂದು ನಮೂದಾಗಿರುತ್ತದೆ.

G) ಎಪ್ರೀಲ್-2019 ರಿಂದ ಮಾರ್ಚ-2020ರ ವರೆಗೆ ಮಾಹಿತಿಯನ್ನು ಅವಲೋಕಿಸಿದಾಗ ಎಪ್ರೀಲ್-2019 ರಿಂದ ಮಾರ್ಚ-2020ರ ವರೆಗೆ ಡಿಸಕನೆಕ್ಟ ಹಿಸ್ಟರಿ ಎಂದು ನಮೂದಿಸಿದ್ದು ಇರುತ್ತದೆ. ಎಪ್ರೀಲ್ ರಿಂದ ಮಾರ್ಚ-2021ರವರೆಗೆ ಎಪ್ರೀಲ್-2020ರ ಮಾಹೆಯನ್ನು ಹೊರತುಪಡಿಸಿ ಉಳಿದ ಮಾಹೆಗಳಲ್ಲಿ ಡಿಸಕನೆಕ್ಟ ಎಂದು ನಮೂದಿಸಿದ್ದು ಇರುತ್ತದೆ. ಎಪ್ರೀಲ್-2020 ರ ಮಾಹೆಯಲ್ಲಿ DL ಎಂದು ನಮೂದಿಸಿದ್ದು ಇರುತ್ತದೆ.

......4

H) ಎಪ್ರೀಲ್-2021 ರಿಂದ ಫೆಬ್ರುವರಿ-2022 ರ ವರೆಗೆ ಸದರಿ ಸ್ಥಾವರವನ್ನು ಓದಲಾಗಿ ಡಿಸ್ಕನೆಕ್ಟ ಎಂದು ಮಾಹಿತಿಯು ಕಸ್ಟಮರ್ ಹಿಸ್ಟರಿಯಿಂದ ತಿಳಿದು ಬರುತ್ತದೆ.

4) ಸದರಿ ಸ್ಥಾವರಕ್ಕೆ ಸುಡತಿಯಾದ ಮಾಹಿತಿಯು ಈ ಕೆಳಗಿನಂತೆ ಇರುತ್ತದೆ. ಜುಲೈ-2012 ರಿಂದ ಮಾರ್ಚ-2013 ರಲ್ಲಿ ರಿಡಿಂಗ್ ಪ್ರಕಾರ ಸುಡತಿಗೆ ಬಿಲ್ಲನ್ನು ಮಾಡಿರುತ್ತವೆ. ಎಪ್ರೀಲ್-2013 ರಿಂದ ಮಾರ್ಚ-2014 ರವರೆಗೆ ಮತ್ತು ಎಪ್ರೀಲ್-2014 ರಿಂದ ಮಾರ್ಚ-2015 ರ ವರೆಗೂ/ಎಪ್ರೀಲ್-2015 ರಿಂದ ನವೆಂಬರ್-2015ರ ವರೆಗೆ ಸುಡತಿ ಪ್ರಕಾರ ಬಿಲ್ಲನ್ನು ಮಾಡಿದ್ದು, ಡಿಸೆಂಬರ್-2015 ರಿಂದ ಮಾರ್ಚ-2016ರ ವರೆಗೆ ಮಿನಿಮಮ್ ಪ್ರಕಾರ ಬಿಲ್ಲನ್ನು ನೀಡಿರುತ್ತಾರೆ. ಅದೇ ರೀತಿ ಎಪ್ರೀಲ್-2016 ರಿಂದ ಮಾರ್ಚ-2017 ರವರೆಗೆ ಸುಡತಿ ಪ್ರಕಾರ ಬಿಲ್ಲನ್ನು ಮಾಡಿದ್ದು, ಮಾರ್ಚ-2019 ರಲ್ಲಿ ಒಟ್ಟಿಗೆ ಬಳಕೆ ಬಂದಿರುವುದರಿಂದ 4060 ಯುನಿಟ್‌ಗೆ ಬಿಲ್ಲನ್ನು ಮಾಡಿದ್ದು, ಇರುತ್ತದೆ. ಮತ್ತು ಎಪ್ರೀಲ್-2019 ರಿಂದ ಫೆಬ್ರುವರಿ-2022 ರವರೆಗೂ ಡಿಸ್ ಎಂದು ಇದ್ದು, ಮಿನಿಮಮ್ ಡಿಮ್ಯಾಂಡ್ ಅಗುತ್ತಿರುತ್ತದೆ.

ಈ ವಿಷಯವಾಗಿ ಸದರಿ ಗ್ರಾಹಕರು ಜುಲೈ-2012 ರಿಂದ ಅಕ್ಟೋಬರ್-2018 ರವರೆಗಿನ ಒಟ್ಟು ಸುಡತಿ ಮೊತ್ತ ರೂ.14414/-ಗಳನ್ನು ಭರಣ ಮಾಡಿ ಅಕ್ಟೋಬರ್-2018 ಕ್ಕೆ ಯಾವುದೇ ಬಾಕಿ ಇಲ್ಲದಿರುವುದು ಕಂಡು ಬಂದಿರುತ್ತದೆ. ಆದರೆ ನವೆಂಬರ್-2018 ರಿಂದ ಫೆಬ್ರುವರಿ-2019 ರವರೆಗೆ VACANT ಎಂದು ನೀಡಿರುವ ಬಿಲ್ಲು ಇದ್ದು ಮಾರ್ಚ-2019 ರ ಬಿಲ್ಲಿನಲ್ಲಿ 4060 ಬಳಕೆ ಸುಡತಿ ಬಂದಿರುವುದರಿಂದ ರೂ. 34527/-ಗಳು ಹಿಂದಿನ ಮಿನಿಮಮ್ ನವೆಂಬರ್-2018 ರಿಂದ ಫೆಬ್ರುವರಿ-2019 ರವರೆಗಿನ ಮಿನಿಮಮ್ ಚಾರ್ಜ ಸೇರಿ ಮಾರ್ಚ-2019 ರಲ್ಲಿ ರೂ.34527/- ಬಿಲ್ಲನ್ನು ನೀಡಿದ್ದು ಇರುತ್ತದೆ. ಎಪ್ರೀಲ್-2019 ರಿಂದ ಫೆಬ್ರುವರಿ-2022 ರವರೆಗೂ ಒಟ್ಟು ಮಿನಿಮಮ್ ಆಕರಣೆ ಮಾಡುತ್ತಾ ಬಂದಿರುವುದು ಒಟ್ಟು ಮೊತ್ತ ರೂ.1,17,818/-ಗಳು ಇರುತ್ತದೆ. ಈ ವಿಷಯವಾಗಿ ಸಿವೈಎಸ್-2606 ದಿನಾಂಕ:31-01-2014 ರ ಪ್ರಕಾರ ರಿಕವರಿ ಆಕ್ಟ 1976 ಪ್ರಕಾರ ಗ್ರಾಹಕರಿಗೆ ಈ ಕಚೇರಿ ಪತ್ರದ ಸಂಖ್ಯೆ:5889-90 ದಿ:28-09-2020 ರಂದು ಈ ಮೂರು ತಿಂಗಳ ಕರಾರು ಪತ್ರ ಹಾಗೂ ಕಂಬ ಮತ್ತು ತಂತಿ ಕಳಚಿದ ಬಗ್ಗೆ ತಿಳಿಸಿ ಪತ್ರವನ್ನು ಬರೆಯಲಾಗಿ ಇರುತ್ತದೆ. ಕರಾರು ಪತ್ರ ರದ್ದು ಪಡಿಸುವ ಬಗ್ಗೆ ನೀಡಿದ ನೋಟೀಸು ಅನ್ವಯ ಈ ಕಚೇರಿ ಪತ್ರ ಸಂಖ್ಯೆ:RSD/AEE/AE/T/2020-21/5870 Dt:10-12-2021 ರಂದು LTMR ವಿಭಾಗಕ್ಕೆ ಪತ್ರವನ್ನು ಸ್ಥಳವನ್ನು ಪರಿಶೀಲಿಸಲು ವರದಿಯನ್ನು ನೀಡುವಂತೆ ಪತ್ರವನ್ನು ಬರೆದಿರುತ್ತಾರೆ.

ಸದರಿ ಪತ್ರಕ್ಕೆ ಎಲ್.ಟಿ.ಎಂ.ಆರ್. ಉಪ ವಿಭಾಗದ ಮುಖ್ಯಸ್ಥರು ಸ್ಥಾವರದ ಮಾಪಕ ಪರೀಕ್ಷೆ ಸಲುವಾಗಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಇಲ್ಲದಿರುವುದು ಕಂಡು ಬಂದಿದ್ದು ಗ್ರಾಹಕರನ್ನು ಸಂಪರ್ಕಿಸಿದಾಗ ಅವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೆ ಇರುವುದರಿಂದ ಇದರ ಬಗ್ಗೆ ಶಾಖಾಧಿಕಾರಿಗಳು ತಿಳಿಸಿದಾಗ ಮನೆಯಲ್ಲಿ ಮದುವೆ ಇದ್ದ ಕಾರಣ ನನಗೆ ಬರಲು ಆಗುವುದಿಲ್ಲ ಎಂದು ಜನೇವರಿ 3/2022 ರ ನಂತರ ಕರೆ ಮಾಡಿದರೆ ಕರೆಯನ್ನು ಸ್ವೀಕರಿಸಿರುವುದಿಲ್ಲವೆಂದು ಮತ್ತು ದಿನಾಂಕ: 14-01-2021 ರಂದು ಕಾರ್ಯನಿರ್ವಾಹಕ ಇಂಜಿನೀಯರ(ವಿ) 15-01-2022 ರಂದು ಪರೀಕ್ಷಣೆ ಮಾಡಿ ಅವರು ಕೂಡಾ ಬರುತ್ತಾರೆಂದು ತಿಳಿಸಿದ್ದಕ್ಕೆ ಕರೆ ಮಾಡಲಾಗಿ ಬರಲು ನಿರಾಕರಿಸಿರುತ್ತಾರೆ ಮತ್ತು ಪರೀಕ್ಷಣೆ ಮಾಡುವ ವೇಳೆ ಅವರ ಸಿಬ್ಬಂದಿಯವರು ಕೂಡಾ ತಪಾಸಣಾ ವರದಿಗೆ ಸಹಿಯನ್ನು ಹಾಗೂ ವರದಿಯನ್ನು ತೆಗೆದುಕೊಳ್ಳಲು ನಿರಾಕರಿಸಿರುತ್ತಾರೆ. ಹಾಗೂ ಮಾಹಿತಿಯನ್ನು ತಿಳಿಸಿ ತಪಾಸಣಾ ವರದಿಯನ್ನು ಅವರ ಕಚೇರಿ ಪತ್ರದ ಸಂಖ್ಯೆ 525-528 ದಿನಾಂಕ:17-01-2022 ರ ಮೂಲಕ ತಪಾಸಣಾ ವರದಿಯನ್ನು ಕಳುಹಿಸಿರುತ್ತಾರೆ. ಪತ್ರ ವರದಿಯನ್ನು ಲಗತ್ತಿಸಲಾಗಿದೆ. ಎಮ್.ಆರ್.ಟಿ ವರದಿಯನ್ನು ಲಗತ್ತಿಸಲಾಗಿದೆ.

ಸದರಿ ಸ್ಥಾವರಕ್ಕೆ ವರದಿಯನ್ನು ನೀಡಿದ ನಂತರ ಸದರಿ ಸ್ಥಾವರವನ್ನು ಡಿಸಮೆಂಟಲ್ ಮಾಡಲು ಈ ಕಚೇರಿ ಪತ್ರದ ಸಂಖ್ಯೆ:8433 ದಿನಾಂಕ:16-02-2022 ರಂದು ಜ್ಞಾಪನಾ ಪತ್ರ ಹೊರಡಿಸಲು ವಿಭಾಗ ಕಚೇರಿಗೆ ಕಳುಹಿಸಿದ್ದು ಇರುತ್ತದೆ. ಅಂದಾಜು ಪತ್ರಿಕೆಯ ಪ್ರತಿಯನ್ನು ಮತ್ತು ವಿಭಾಗ ಕಚೇರಿಗೆ ಬರೆದ ಪತ್ರದ ಪ್ರತಿಯನ್ನು ಸಹ ಲಗತ್ತಿಸಲಾಗಿದೆ.

ಸದರಿ ಸ್ಥಾವರಕ್ಕೆ ಕಂದಾಯ ಬಾಕಿ ಮೊತ್ತವನ್ನು ನೀಡಿದ ಪತ್ರದಂತೆ ತುಂಬದೇ ಇರುವ ಕಾರಣ ಸದರಿ ಸ್ಥಾವರಕ್ಕೆ ಇರುವ ಠೇವಣಿ ಮೊತ್ತ ರೂ.14880/-ಗಳನ್ನು ENMP-06 ಇರುವ ಬಾಕಿ ಮೊತ್ತ ರೂ.117808/-ಗಳಲ್ಲಿ ಠೇವಣಿ ಮೊತ್ತ ರೂ.14880/-ಗಳನ್ನು ಹೊಂದಾಣಿಕೆ ಮಾಡಿ ಉಳಿದ ಕಂದಾಯ ಬಾಕಿ ಮೊತ್ತ ರೂ.102938/-ಗಳನ್ನು ಇವರದೇ ಸ್ಥಾವರವಾದ RMPMP-39916 ಹೆಸರಿನ ರಾಮಾಪೂರ ಗ್ರಾಮದಲ್ಲಿ ಇರುವ ಮೆ॥ವೈಷ್ಣವಿ ಸ್ಟೋನ ಕ್ರಶರ್ ಎಂಬ ಹೆಸರಿನ ಸ್ಥಾವರಕ್ಕೆ ವರ್ಗಾಯಿಸಿ, ಕಚೇರಿ ಪತ್ರ ಸಂಖ್ಯೆ:7871-72 ದಿನಾಂಕ:28-01-2022 ರ ಮುಖಾಂತರ ಹೊಂದಾಣಿಕೆ ಮಾಡಿರುವ ಪತ್ರದ ಪ್ರತಿಯನ್ನು ಸಹ ಲಗತ್ತಿಸಲಾಗಿದೆ. ಸದರಿ ಗ್ರಾಹಕರು ತಮ್ಮ ದೂರಿನಲ್ಲಿ ತಿಳಿಸಿದ ಪ್ರಕಾರ WNMP-6 ಗೆ 2016 ರಿಂದ ಚಾಲ್ತಿಯಲ್ಲಿ ಇಲ್ಲವೆಂದು

......5

ತಿಳಿಸಿದ್ದು, ಸತ್ಯಕ್ಕೆ ದೂರವಾಗಿರುತ್ತದೆ. ಮಾರ್ಚ-2019 ರವರೆಗೆ ಸುಡತಿಯೂ ಬಂದಿರುತ್ತದೆ. ಅದೇ ರೀತಿ ಗ್ರಾಹಕರು 2016 ರಿಂದ ಬಳಸದೇ ಇದ್ದಲ್ಲಿ ಈ ಕಚೇರಿಗೆ ಡಿಸಮೆಂಟಲ್ ಮಾಡಲು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದರೂ ಸಹ ರಿಕವ್ಹರಿ ಆ್ಯಕ್ಟ ಪ್ರಕಾರ ಕಂದಾಯ ಮೊತ್ತವನ್ನು ವಸೂಲಿ ಮಾಡಲು ಈ ಕಚೇರಿಯಿಂದ ಪತ್ರವನ್ನು ಬರೆದಿದ್ದು ತದನಂತರ ಗ್ರಾಹಕರು ಬಾಕಿ ಮೊತ್ತವನ್ನು ತುಂಬದೆ ಇದ್ದ ಬಗ್ಗೆ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿ ಕರಾರು ಪತ್ರವನ್ನು ರದ್ದು ಪಡಿಸಿ ಈ ಕಚೇರಿಯಿಂದ ಡಿಸಮೆಂಟಲ್ ಪ್ರಸ್ತಾವನೆಯನ್ನು ಕಳುಹಿಸಿ WNMP-6 ಗೆ ಹೊಂದಾಣಿಕೆ ಮಾಡಿ ತುಂಬಲು ತಿಳಿಸಿ ಬಿಲ್ಲನ್ನು ಕಳುಹಿಸಲಾಗಿ ಇಷ್ಟೆಲ್ಲಾ ಮಾಹಿತಿಯನ್ನು ದಯಾಪರರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ವಿನಯ ಎಚ್ ನೀಲರಡ್ಡಿ, ರೇಣುಕಾಂಬಾ ಕಾಲೋನಿ, ಲಕ್ಷ್ಮೀ ನಗರ, ವಿದ್ಯಾಗಿರಿ, ಧಾರವಾಡ ಇವರ ಸ್ಥಾವರ ಸಂಖ್ಯೆ: WNMP-06 ನೇದ್ದ ಸ್ಥಾವರವು ಎಲ್.ಟಿ-5(ಬಿ) ಜಕಾತಿಯಡಿಯಲ್ಲಿ ದಿನಾಂಖ:17-04-1995 ರಲ್ಲಿ ವಿದ್ಯುತ್ ಮಂಜೂರಾತಿಯೊಂದಿಗೆ ಜಲ್ಲಿ ಕಲ್ಲು ಕ್ರಷರ್ ಘಟಕ್ಕೆ ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರವು ದಿನಾಂಕ:05-12-2014 ರಂದು ಜಿಲ್ಲಾಧಿಕಾರಿಗಳು ಧಾರವಾಡ ಜಿಲ್ಲೆ ಇವರ ಆದೇಶದನುಸಾರ ಜಲ್ಲಿ ಕಲ್ಲು ಕ್ರಶರ್ ಘಟಕಗಳನ್ನು ಬಂದ ಮಾಡಲಾಗಿದ್ದಿರುತ್ತದೆ. ಸದರಿ ಸ್ಥಾವರದ ಬಳಕೆಯು ಸ್ಥಗಿತಗೊಂಡಿರುವುದು ಕಂಡು ಬರುತ್ತದೆ. ಅಲ್ಲಿಂದ 6 ರಿಂದ 7 ವರ್ಷಗಳ ನಂತರ ದಿನಾಂಕ:05-10-2021 ರಲ್ಲಿ ಏಕಾಏಕಿ ಹೆಸ್ಕಾಂನವರು ನನಗೆ ಸದರಿ ಸ್ಥಾವರಕ್ಕೆ ಸಂಬಂಧಪಟ್ಟಂತೆ ರೂ. 1,17,808/-ಗಳನ್ನು ಹೆಚ್ಚುವರಿಯಾಗಿ ಬೇಡಿಕೆ ಆಕರಿಸಿ ಬಿಲ್ ನೀಡಿದ್ದು, ಸದರಿ ಮೊತ್ತವನ್ನು ಪಾವತಿಸುವಂತೆ ಸೂಚಿಸಿರುವುದು ಕಂಡು ಬರುತ್ತದೆ. ಸದರಿ ಮೊತ್ತವನ್ನು ಬರಿಸದೇ ಇರುವದಕ್ಕೆ ಹೆಚ್ಚುವರಿಯಾಗಿ ಆಕರಿಸಿರುವ ರೂ. 1,17,808/-ಗಳಲ್ಲಿ ಸದರಿ ಸ್ಥಾವರಕ್ಕೆ ಇದ್ದ ನನ್ನ ಠೇವಣಿ ಮೊತ್ತ ರೂ.14880/-ನ್ನು ಹೊಂದಾಣಿಕೆ ಮಾಡಿ, ಉಳಿದ ಕಂದಾಯ ಬಾಕಿ ಮೊತ್ತವನ್ನು ನನ್ನ ಇನ್ನೊಂದು ಸ್ಥಾವರ ಸಂಖ್ಯೆ RMPMP-39916 ವರ್ಗಾಯಿಸಿರುವುದು ಕಂಡು ಬರುತ್ತದೆ. ಲೈಸನ್ಸುದಾರರು ನಿಯಮಬಾಹಿರವಾಗಿ ತಮ್ಮ ಇಚ್ಛೆಯಂತೆ ಹೆಚ್ಚುವರಿಯಾಗಿ ಬೇಡಿಕೆ ಆಕರಿಸಿರುವ ಮೊತ್ತ ರೂ. 1,17,808/-ಗಳನ್ನು ಹಿಂಪಡೆಯುವಂತೆ ಆದೇಶ ಹೊರಡಿಸಬೇಕೆಂದು ಗ್ರಾಹಕರು ದಿನಾಂಕ31-01-2022 ರಂದು ವೇದಿಕೆಗೆ ದೂರು ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.
2. ಸ್ಥಾವರ ಸಂಖ್ಯೆ: WNMP-06 ನೇದ್ದ ಸ್ಥಾವರವು ಎಲ್.ಟಿ-5(ಬಿ) ಜಕಾತಿಯಡಿಯಲ್ಲಿ ದಿನಾಂಕ:17-04-1995 ರಲ್ಲಿ ವಿದ್ಯುತ್ ಮಂಜೂರಾತಿಯೊಂದಿಗೆ ಜಲ್ಲಿ ಕಲ್ಲು ಕ್ರಷರ್ ಘಟಕಕ್ಕೆ ಸಂಪರ್ಕಿತಗೊಂಡಿದ್ದು ಸದರಿ ಸ್ಥಾವರದಲ್ಲಿ ಬಿಟ್ಟು ಹೋಗಿರುವ ಬಳಕೆಯ ಮೊತ್ತವನ್ನು ಪಾವತಿಸುವಂತೆ ದಿನಾಂಕ:05-10-2021 ರಲ್ಲಿ ಕಂದಾಯ ಬಾಕಿ ಮೊತ್ತವನ್ನು ನೀಡಿರುವುದು ಕಂಡು ಬರುತ್ತದೆ. ಸದರಿ ಮೊತ್ತವನ್ನು ತುಂಬದೇ ಇರುವ ಕಾರಣ ಸದರಿ ಸ್ಥಾವರಕ್ಕೆ ಇರುವ ಠೇವಣಿ ಮೊತ್ತ ರೂ.14880/-ಗಳನ್ನು ENMP-06 ಇರುವ ಬಾಕಿ ಮೊತ್ತ ರೂ.117808/-ಗಳಲ್ಲಿ ಠೇವಣಿ ಮೊತ್ತ ರೂ.14880/-ಗಳನ್ನು ಹೊಂದಾಣಿಕೆ ಮಾಡಿ ಉಳಿದ ಕಂದಾಯ ಬಾಕಿ ಮೊತ್ತ ರೂ.102938/-ಗಳನ್ನು ಇವರದೆ ಸ್ಥಾವರವಾದ RMPMP-39916 ಹೆಸರಿನ ರಾಮಾಪೂರ ಗ್ರಾಮದಲ್ಲಿ ಇರುವ ಮೆ॥ವೈಷ್ಣವಿ ಸ್ಟೋನ ಕ್ರಶರ್ ಎಂಬ ಹೆಸರಿನ ಸ್ಥಾವರಕ್ಕೆ ವರ್ಗಾಯಿಸಿ ಕಚೇರಿ ಪತ್ರ ಸಂಖ್ಯೆ:7871-72 ದಿ:28-01-2022 ರ ಮುಖಾಂತರ ಹೊಂದಾಣಿಕೆ ಮಾಡಿರುವುದು ಕಂಡು ಬರುತ್ತದೆ. ಸದರಿ ಗ್ರಾಹಕರು ತಮ್ಮ ದೂರಿನಲ್ಲಿ ತಿಳಿಸಿದ ಪ್ರಕಾರ WNMP-6ಗೆ 2016 ರಿಂದ ಚಾಲ್ತಿಯಲ್ಲಿ ಇಲ್ಲವೆಂದು ತಿಳಿಸಿದ್ದು, ಸತ್ಯಕ್ಕೆ ದೂರವಾಗಿರುತ್ತದೆ. ಮಾರ್ಚ-2019 ರವರೆಗೆ ಸುಡತಿಯೂ ಬಂದಿರುತ್ತದೆ. ಅದೇ ರೀತಿ ಗ್ರಾಹಕರು 2016 ರಿಂದ ಬಳಸದೆ ಇದ್ದಲ್ಲಿ ಈ ಕಚೇರಿಗೆ ಡಿಸಮೆಂಟಲ್ ಮಾಡಲು ಯಾವುದೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದರೂ ಸಹ ರಿಕವರಿ ಆ್ಯಕ್ಟ 1976 ಪ್ರಕಾರ ಕಂದಾಯ ಮೊತ್ತವನ್ನು ವಸೂಲಿ ಮಾಡಲು ಈ ಕಚೇರಿಯಿಂದ ಪತ್ರವನ್ನು ಬರೆದಿದ್ದು ತದನಂತರ ಗ್ರಾಹಕರು ಬಾಕಿ ಮೊತ್ತವನ್ನು ತುಂಬದೆ ಇದ್ದ ಬಗ್ಗೆ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿ, ಕರಾರು ಪತ್ರವನ್ನು ರದ್ದು ಪಡಿಸಿ, ಡಿಸಮೆಂಟಲ್ ಪ್ರಸ್ತಾವನೆಯನ್ನು ಕಳುಹಿಸಿ RMPMP-39916 ಗೆ ಹೊಂದಾಣಿಕೆ ಮಾಡಿ, ಬಾಕಿ ಮೊತ್ತವನ್ನು ತುಂಬಲು ತಿಳಿಸಿ ಗ್ರಾಹಕರಿಗೆ ಬಿಲ್ಲನ್ನು ಕಳುಹಿಸಲಾಗಿರುವುದು ಕಂಡು ಬರುತ್ತದೆ.

......6

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರ ಪ್ರಕರಣದಲ್ಲಿ ಗ್ರಾಹಕರ ಇತಿಹಾಸವನ್ನು ಪರಿಶೀಲಿಸಲಾಗಿ ಎಪ್ರೀಲ್-2019 ರಿಂದ ಫೆಬುವರಿ-2022 ರವರೆಗೆ Disconection ಎಂದು ನಮೂಧಿಸಿದ್ದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ KERC Conditions of Supply Reg. 32.07 ರ ಪ್ರಕಾರ ಕ್ರಮ ಜರುಗಿಸಬೇಕಾಗಿದ್ದು, ಆದರೆ ಉಪ ವಿಭಾಗಾಧಿಕಾರಿಗಳು KERC Conditions of Supply Reg. 32.07 ರ ಪ್ರಕಾರ ಯಾವುದೇ ಕ್ರಮ ಜರಗಿಸದೇ ಇರುವುದು ಮೇಲಿನ ಅಂಶಗಳಿಂದ ಕಂಡು ಬಂದ ಪ್ರಯುಕ್ತ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿರುತ್ತದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-257/2022/**cys-314 **ದಿನಾಂಕ:** 14 JUN 2022

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ:HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ(ಆರ್.ಎ)/ಎಓ/20-21/ಸಿವೈಎಸ್-4283 ದಿ:13-01-2021 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಗಶಃ ಪರಿಗಣಿಸಲಾಗಿದ್ದು, KERC Conditions of Supply Reg. 32.07 ರ ಪ್ರಕಾರ ಕ್ರಮ ಜರುಗಿಸಿ, ಸದರಿ ಸ್ಥಾವರದ ಬಾಕಿ ಮೊತ್ತವನ್ನು ಪರಿಷ್ಕರಿಸಿ, ಪರಿಷ್ಕರಿಸಿದ ಬಿಲ್ಲನ್ನು ಗ್ರಾಹಕರಿಗೆ ನೀಡಿ, ಬಾಕಿ ಮೊತ್ತವನ್ನು ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳುವ ಕ್ರಮ ಜರುಗಿಸುವುದು.

(ರೇವಣಸಿದ್ದಪ್ಪ ಗವಣ್ಣವರ)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಶ್ರೀಮತಿ ಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

(ಶ್ರೀಮತಿ ಶರಣಮ್ಮ ಎಸ್ ಜಂಗಿನ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**ಶ್ರೀ ವಿನಯ ಎಚ್ ನೀಲರಡ್ಡಿ,**
(R R No : WNMP-06)
ರೇಣುಕಾಂಬಾ ಕಾಲೋನಿ,
ಲಕ್ಷ್ಮೀ ನಗರ, ವಿದ್ಯಾಗೀರಿ,
ಧಾರವಾಡ-580004.

**"ನೊಂದಣಿ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹುವಿಸಕಂನಿ., ಧಾರವಾಡರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. **[ನೊಂದಾಯಿತ ಅಂಚೆ ಮೂಲಕ]**
5. ಮಹಾ ಕಡತ.